## ನೇಲ್ ಆರ್ಟ್ ರಕ್ಷಣೆಗೆ ಟಿಪ್ಸ್

- ನೇಲ್ ಆರ್ಟ್ ಮಾಡಿಕೊಳ್ಳುವಾಗ ಶುಚಿತ್ವದ ಕಡೆ ಗಮನಕೊಡಿ.ಈ ಸಂದರ್ಭದಲ್ಲಿ ಸಹಜವಾಗಿಯೇ ಬಣ್ಣಗಳು ಬೆರಳುಗಳ ಮೇಲೆ ಹರಡಿಕೊಳ್ಳುತ್ತವೆ. ತುಸು ಶ್ರದ್ಧೆ ವಹಿಸಿ ಕೆಲಸ ಮಾಡಿದರೆ ಬಣ್ಣಗಳು ಹರಡದಂತೆ ತಡೆಯಬಹುದು. ಆದರೂ ಬಣ್ಣ ಹರಡಿಕೊಂಡರೆ ಆದಷ್ಟು ಬೇಗನೆ ಅದನ್ನು ಶುಚಿಗೊಳಿಸಬೇಕು. ಇಲ್ಲದಿದ್ದರೆ ಹರಡಿಕೊಂಡ ಬಣ್ಣ ಅಂದದ ಉಗುರುಗಳ ಡಿಸೈನ್ ಅನ್ನು ಅರ್ಥವಿಲ್ಲದಂತೆ ಮಾಡುತ್ತದೆ. ಉಗುರಿನ ಅಂದವೂ ಕೆಟ್ಟು ಹೋಗುತ್ತದೆ.
- ಎಲ್ಲಕ್ಕಿಂತ ಮುಖ್ಯವಾದುದು ಕಲರ್ ಬ್ಯಾಲೆನ್ಸಿಂಗ್. ಬಣ್ಣಗಳ ಹೊಂದಾಣಿಕೆ ಸರಿಯಾಗಿದ್ದರೆ ಮಾತ್ರ ನೇಲ್ ಆರ್ಟ್‌ಗೆ ಒಂದು ಲುಕ್ ಬರುತ್ತದೆ. ಇಲ್ಲದಿದ್ದರೆ ಬಣ್ಣಗಳು ಒಂದಕ್ಕೊಂದು ಹೊಂದಾಣಿಕೆಯಾಗದೆ ಡಿಸೈನ್ಸ್ ಕೂಡ ಕೆಟ್ಟು ಹೋಗಬಹುದು.
- ಧರಿಸುವ ಉಡುಪಿಗೆ ಮ್ಯಾಚ್ ಆಗುವಂಥ ನೇಲ್ ಜ್ಯುವೆಲ್‌ಗಳನ್ನು ಹಾಕಿ. ಬಟ್ಟೆಗೆ ಸಿಕ್ಕಿ ಹಾಕಿಕೊಳ್ಳದಂತೆ ಎಚ್ಚರವಹಿಸಿ.
- ಮದುವೆ ಮತ್ತು ಪಾರ್ಟಿಗಳಿಗೆ ನೇಲ್ ಆರ್ಟ್ ಜ್ಯುವೆಲ್‌ಗಳು ಹೊಸ ಮೆರುಗು ನೀಡುತ್ತವೆ.



ವೈವಿಧ್ಯಗಳಿವೆ. ತ್ರಿ ಡಿ ನೇಲ್ ಆರ್ಟ್, ಫ್ಲವರ್ ನೇಲ್ ಆರ್ಟ್, ಟ್ರಾನ್ಸಪರೆಂಟ್ ನೇಲ್ ಆರ್ಟ್ ಹಾಗೂ ಸೀಸನಲ್ ನೇಲ್ ಆರ್ಟ್ ಮುಂತಾದವುಗಳಿವೆ. ಮೊದಲೇ ತಿಳಿಸಿದಂತೆ ಈಗಿನ ಹೊಸ ಟ್ರೆಂಡ್ ಅಂದರೆ ಜ್ಯುವೆಲ್ ನೇಲ್ ಆರ್ಟ್ ಹಾಗೂ ಉಗುರಿನ ಕೆಳಭಾಗಕ್ಕೆ ಟ್ರಾನ್ಸಪರೆಂಟ್ ನೇಲ್ ಪೇಂಟ್ ಹಾಕಿ ಅದರ ಮೇಲಿನ ಭಾಗಕ್ಕೆ ವರ್ಣರಂಜಿತ ಹೂವುಗಳನ್ನು ವಿನ್ಯಾಸಗೊಳಿಸುವುದು. ಈ ಹೂವುಗಳನ್ನು ನಿಮ್ಮ ಡ್ರೆಸ್‌ಗಳಿಗೆ ಮ್ಯಾಚ್ ಮಾಡುವುದು ಇದೀಗ ಸಾಕಷ್ಟು ಟ್ರೆಂಡಿಂಗ್‌ನಲ್ಲಿವೆ.

ಈ ತರಹದ ಜ್ಯುವೆಲ್ ನೇಲ್ ಆರ್ಟ್ ಮಾಡಿಸಿಕೊಳ್ಳುವುದು ಸುಂದರವಾದ ಡ್ರೆಸ್‌ಗಳಿಗೂ ಸಖತ್ತಾಗಿ ಕಾಣುತ್ತದೆ. ಇನ್ನು ಸ್ವತಃ ಮನೆಯಲ್ಲಿಯೇ ಜ್ಯುವೆಲ್ ಆರ್ಟ್ ಮಾಡಿಕೊಳ್ಳಬಯಸುವವರು ಆನ್‌ಲೈನ್‌ನಲ್ಲಿ ಕೂಡ ನೇಲ್ ಜ್ಯುವೆಲ್ ಕಿಟ್‌ಗಳನ್ನು ತರಿಸಬಹುದಾಗಿದೆ. ಹಾಗೇ ನಿಮ್ಮ ಡ್ರೆಸ್‌ಗೆ ಮ್ಯಾಚ್ ಆಗುವ ರೀತಿಯಲ್ಲಿ ಮನೆಯಲ್ಲಿಯೇ ನಿಮ್ಮ ಉಗುರುಗಳನ್ನು ಸುಂದರವಾಗಿ ಸಿಂಗರಿಸಬಹುದು. ನೇಲ್ ಜ್ಯುವೆಲ್‌ಗಳಿಂದ ಉಗುರನ್ನು ಸಿಂಗರಿಸಲು ಸಮಯವಿಲ್ಲದವರಿಗೆ, ಜ್ಯುವೆಲ್‌ಗಳಿಂದ ಸಿಂಗರಿಸಿದ ರೆಡಿಮೇಡ್ ನೇಲ್‌ಗಳು ಫ್ಯಾನ್ಸಿ ಮಳಿಗೆಗಳಲ್ಲಿ ದೊರೆಯುತ್ತಿದ್ದು ಅವುಗಳನ್ನು ಉಗುರಿನ ಮೇಲೆ ಅಂಟಿಸಿಕೊಳ್ಳಬಹುದು. ಉಗುರಿನ ಉದ್ದ ಹಾಗೂ ಅಗಲ ನೋಡಿಕೊಂಡು ಇವುಗಳನ್ನು ಆಯ್ಕೆ ಮಾಡಿಕೊಳ್ಳಬಹುದು.

ಅದ್ದೂರಿ ಪಾರ್ಟಿಗಳಿಗೆ, ಕಾಲೇಜು ಎಥ್ನಿಕ್ ಡೇ ಹಾಗೂ ಮದುವೆ, ಮೆಹಂದಿ, ಬಳೆ ಶಾಸ್ತ್ರ.. ಇಂತಹ ಸಮಾರಂಭಗಳಿಗೆ ಹೋಗುವವರು ಈ ನೇಲ್ ಆರ್ಟ್ ಅನ್ನು ಸುಲಭವಾಗಿ ಧರಿಸಿಕೊಂಡು ಹೋಗಬಹುದು. ಹಾಗೇ ತಿರುಗಿ ಬಂದ ನಂತರ ಬಿಚ್ಚಿ ಸುರಕ್ಷಿತವಾಗಿ ಎತ್ತಿ ಇಡಬಹುದು. ಇಷ್ಟೆಲ್ಲಾ ಕಷ್ಟಪಟ್ಟು ನೇಲ್ ಆರ್ಟ್ ಮಾಡಿಸಿಕೊಂಡ ಮೇಲೆ ಅದನ್ನು ರಕ್ಷಿಸುವುದೂ ಕೂಡ ನಮ್ಮ ಹೊಣೆ.

### ಹಾಲೊವಿನ್ ನೇಲ್ ಆರ್ಟ್

ಉಗುರು ಬಣ್ಣಗಳನ್ನು ಬಳಸಿ ಬಗೆ ಬಗೆ ವಿನ್ಯಾಸ ಮೂಡಿಸುವುದು ಬೆರಗು ಉಂಟು ಮಾಡುತ್ತದೆ. ಈಗ ಹಾಲೊವಿನ್ ನೇಲ್ ಆರ್ಟ್ ಟ್ರೆಂಡ್ ಕೂಡ ಆರಂಭವಾಗಿದೆ. ಯುವತಿಯರು ತಮ್ಮ ಉದ್ದದ ಉಗುರಿಗೆ ಚಿತ್ರ, ವಿಚಿತ್ರ ವಿನ್ಯಾಸಗಳನ್ನು ಮಾಡಿ ಫೇಸ್‌ಬುಕ್, ಇನ್‌ಸ್ಟಾಗ್ರಾಮ್‌ನಲ್ಲಿ ಹಂಚಿಕೊಳ್ಳುತ್ತಿದ್ದಾರೆ. ಇಂತಹ ಹಾಲೊವಿನ್ ನೇಲ್ ಡಿಸೈನ್‌ಗಳು ನೋಡಲು ಆಕರ್ಷಕವಾಗಿಯೂ ಇರುತ್ತವೆ. ಕೆಂಪು, ಕಪ್ಪು, ನೀಲಿಯಂತಹ ಗಾಢ ಬಣ್ಣಗಳನ್ನು ಉಪಯೋಗಿಸಿಕೊಂಡು ಉಗುರಿನಲ್ಲಿ ರಕ್ತದ ಕಲೆಯಂತೆ, ರಕ್ತ ತೊಟ್ಟಿಕ್ಕುವಂತೆ, ನೋಡಿದ ಕೂಡಲೇ ದೆವ್ವದಂತೆ ಕಾಣುವ, ಮನಸ್ಸಿಗೆ ರೇಜಿಗೆ ಹುಟ್ಟಿಸುವಂಥ ವಿನ್ಯಾಸಗಳನ್ನು ಬಿಡಿಸುತ್ತಿದ್ದಾರೆ. ಹಾಲೊವಿನ್ ವಿನ್ಯಾಸ ಮಾಡಿಕೊಂಡಾಗ ಬೆರಳಿಗೆ ಸುರುಳಿ



ಸುರುಳಿಯಾಕಾರದ ಉಂಗುರಗಳನ್ನು ತೊಟ್ಟರೆ ಹಾಲೋವಿನ್ ನೇಲ್ ಆರ್ಟ್ ಎದ್ದು ಕಾಣುತ್ತದೆ ಅಕ್ರಲಿಕ್, ನಿಯಾನ್ ನೇಲ್ ಆರ್ಟ್‌ಗೆ ಹೋಲಿಸಿದರೆ ಹಾಲೋವಿನ್ ನೇಲ್ ಆರ್ಟ್ ಮಾಡಿಕೊಳ್ಳಲು ಸುಲಭ.. ಬ್ಯೂಟಿ ಪಾರ್ಲರ್ ಅಥವಾ ನೇಲ್ ಆರ್ಟಿಸ್ಟ್ ಬೇಕಿಲ್ಲ.

### ಅಲರ್ಜಿ ಇದ್ದರೆ ಎಚ್ಚರಿಕೆ!

ನೈಲ್ ಆರ್ಟ್ ಉಗುರಿನ ಬೆಳವಣಿಗೆಯ ಮೇಲೆ ಪರಿಣಾಮ ಬೀರುತ್ತದೆ. ಯಾವಾಗಲಾದರೂ ಒಮ್ಮೆ ಈ ರೀತಿ ಉಗುರಿನ ಸಿಂಗಾರ ಮಾಡಿಕೊಳ್ಳುವುದರಲ್ಲಿ ತಪ್ಪೇನಿಲ್ಲ. ಆದರೆ ನಿಯಮಿತವಾಗಿ ಮಾಡುವುದರಿಂದ ಉಗುರಿನ ಬೆಳವಣಿಗೆಗೆ ತೊಂದರೆ ಉಂಟಾಗಬಹುದು. ಉಗುರಿನ ಅಂದ ಹೆಚ್ಚಿಸುವ ಸಲುವಾಗಿ ಬಣ್ಣ ಹಚ್ಚಿಕೊಳ್ಳುವ ಮುನ್ನ ನೀವು ಹಚ್ಚುವ ಉಗುರಿನ ಬಣ್ಣದ ಗುಣಮಟ್ಟವನ್ನು ಪರಿಶೀಲಿಸಿ ಹಾಗೂ ನಿಮಗೆ ಯಾವುದಾದರೂ ಬಣ್ಣಗಳ ಅಲರ್ಜಿ ಇದ್ದರೆ, ಅದನ್ನು ಖಚಿತಪಡಿಸಿಕೊಂಡು ಮುಂದುವರಿಯಿರಿ.

### ಪ್ರಾಚೀನ ಕಾಲದಲ್ಲೂ...

ಪ್ರಾಚೀನ ಕಾಲದಲ್ಲಿಯೂ ಕೂಡ ಮಹಿಳೆಯರು ತಮ್ಮ ಉಗುರುಗಳನ್ನು ಕಲಾತ್ಮಕವಾಗಿ ಸಿಂಗರಿಸಿಕೊಳ್ಳುತ್ತಿದ್ದರು. ಈಜಿಪ್ಟಿಯನ್ ನಾಗರಿಕತೆಯ ಕಾಲದಲ್ಲಿ ದ್ರಾಕ್ಷಿ ಹಾಗೂ ಇನ್ನಿತರ ಸಸ್ಯಗಳ ಪೊರೆಯನ್ನು ತಮ್ಮ ಉಗುರಿನ ಶೃಂಗಾರಕ್ಕಾಗಿ ಬಳಸಿಕೊಳ್ಳುತ್ತಿದ್ದರು. ಇಷ್ಟೇ ಅಲ್ಲದೆ ಅಂದಿನ ಆದಿವಾಸಿ ಜನಾಂಗದ ಮಹಿಳೆಯರೂ ಕೂಡ ಗೋರಂಟಿ ಎಲೆಯ ರಸವನ್ನು ತಮ್ಮ ಕೈ ಮತ್ತು ಕಾಲಿನ ಉಗುರುಗಳ ಸೌಂದರ್ಯವನ್ನು ಹೆಚ್ಚಿಸಿಕೊಳ್ಳಲು ಉಪಯೋಗಿಸುತ್ತಿದ್ದರು. ಕಾಲ ಬದಲಾದಂತೆ ಇಂದಿನ ಮಹಿಳೆಯರು ತಮ್ಮ ಮನೋಭಾವಕ್ಕೆ ತಕ್ಕಂತೆ ಡಿಸೈನರ್ ನೇಲ್ ಆರ್ಟ್ ಮಾಡಿಸಿಕೊಂಡು ತಮ್ಮ ಉಗುರುಗಳನ್ನು ಅಪ್‌ಡೇಟ್ ಮಾಡಲು ಪ್ರಯತ್ನಿಸುತ್ತಿದ್ದಾರೆ. ■